ಅಧ್ಯಕ್ಷರು :- ಪ್ರಶ್ನೋತ್ತರ ವೇಳೆ ಮುಗಿಯಿತು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಹತ್ತನೇ ಪಟ್ಟಿಯಲ್ಲಿರುವ ಒಟ್ಟು 111 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ಅನುಬಂಧ - 1 ಮಂಡಿಸಲಾಯಿತು

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೇ, ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಅ) ವಾಣಿಜ್ಯ (ಆ) ಸಿವಿಲ್ ಹಾಗೂ (ಇ) ರಾಜಸ್ವ ಸ್ವೀಕೃತಿಗಳ 31ನೇ ಮಾರ್ಚ್ 2001ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

3. ವರದಿಯನ್ನೊಪ್ಪಿಸುವುದು

ಶ್ರೀ ಮನೋಹರ್ ಹೆಚ್. ತಹಸೀಲ್ದಾರ್ (ಉಪಾಧ್ಯಕ್ಷರು) :- ಮಾನ್ಯ ಅಧ್ಯಕ್ಷರೇ, ನಾನು, ವಿಧಾನಸಭೆಯ ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಎಂಟನೆ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು :- ವರದಿಯನ್ನೊಪ್ಪಿಸಲಾಯಿತು.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಒಂದು ಬಿಲ್ ಇತ್ತು, ಮೂರ್ನಾಲ್ಕು ದಿವಸಗಳಿಂದ ಅದನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ನನ್ನ ಮತಕ್ಷೇತ್ರದಲ್ಲಿ ತೊಂದರೆಯಾಗಿದೆ ಎಂದು ಹೇಳಿ ತಮಗೆ ಮೂರು ದಿವಸಗಳ ಹಿಂದೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿ. ಅದನ್ನು ದಿನವೂ ಮುಂದಕ್ಕೆ ಹಾಕುತ್ತಿದ್ದೀರಿ.

ಅಧ್ಯಕ್ಷರು :- ಅದನ್ನು ನಿಲುವಳಿ ಸೂಚನೆ ಅಡಿಯಲ್ಲಿ ಆಲೋ ಮಾಡಿಲ್ಲ, ಜೀರೋ ಅವರ್‌ನಲ್ಲಿ ರೈಸ್ ಮಾಡಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :- ಮಾನ್ಯ ಅಧ್ಯಕ್ಷರೇ, ರೂಲ್ಸ್ ಬುಕ್ ಪ್ರಕಾರ ಪ್ರಶ್ನೋತ್ತರ ಅದ ಮೇಲೆ ನಮಗೆ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು:- ಸೋಮಣ್ಣನವರೆ, ಒಂದು ನಿಮಿಷ ತಾಳಿ, ಪ್ರಿವಿಲೇಜ್ ಮೋಷನ್ ಯಾವಾಗಲೂ ಮುಂದೆ ಇರುತ್ತದೆ. You must give priority to privilege motion. ಪ್ರೆಯಾರಿಟಿ ಪ್ರಿವಿಲೇಜ್ ಮೋಷನ್‌ಗೆ ಇರುತ್ತದೆ. ಐದು ನಿಮಿಷದಲ್ಲೆ ಅವರದು ಮುಗಿದು ಹೋಗುತ್ತದೆ. ಪ್ರಿವಿಲೇಜ್ ಮೋಷನ್ ಅನ್ನು ಶ್ರೀ ಜಯಪ್ರಕಾಶ್ ಹೆಗ್ಡೆ ಹಾಗೂ ಶ್ರೀ ಮಲ್ಲಿಕಾರ್ಜುನ್ ಅವರು ಕೊಟ್ಟಿದ್ದಾರೆ. ಅದಾದಮೇಲೆ ತಮ್ಮದೇ ತೆಗೆದುಕೊಳ್ಳೋಣ;

ಶ್ರೀ ವಿ. ಸೋಮಣ್ಣ :- ಹೋದಸಾರಿ ಹಾಗೇ ಆಯಿತು.

ಅಧ್ಯಕ್ಷರು: - ಅವರು ಮಾತನಾಡಿದ ಮೇಲೆ ತಮಗೆ ಕೊಡುತ್ತೇನೆ. ತಾವು ಶೂನ್ಯ ವೇಳೆಯಲ್ಲಿ ಪ್ರಾರಂಭ ಮಾಡಿ, ಇವತ್ತೇ ಅವಕಾಶ ಕೊಡುತ್ತೇನೆ.

4. ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ:

ವಿಷಯ : ಶಾಸನಸಭೆಯಲ್ಲಿ ತಾಡುಕಟ್ಟುವ ಕೆಲಸ ಎಂಬ ಹೇಳಿಕೆ ಬಗ್ಗೆ

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) :- ಮಾನ್ಯ ಅಧ್ಯಕ್ಷರೇ, ಮೊದಲಿಗೆ ತಾವು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಾ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು "ಶಾಸನಸಭೆಯಲ್ಲಿ ತೌಡು ಕುಟ್ಟುವ ಕೆಲಸ" ಎಂದು ಹೇಳಿ ಸದನದ ಮತ್ತು ಸದಸ್ಯರ ಗೌರವನ್ನು ಕಡಿಮೆ ಮಾಡುವುದರ ಜೊತೆಗೆ ಸದನದ ಹಾಗೂ ಸದಸ್ಯರ ಹಕ್ಕುಚ್ಯುತಿಯನ್ನು ಮಾಡಿದ್ದಾರೆ ಎಂಬ ವಿಷಯಕ್ಕೆ ಪೂರಕವಾಗಿ ಇದನ್ನು ತಂದಿದ್ದು, ಕರ್ನಾಟಕ ವಿಧಾನಮಂಡಲಕ್ಕೆ ಅದರದೇ ಆದ ಇತಿಹಾಸವಿದೆ. ಕರ್ನಾಟಕ ವಿಧಾನಸಭೆ ಹಾಗೂ ವಿಧಾನಪರಿಷತ್ತು ಅನೇಕ ಸಭೆಗಳನ್ನು ನಡೆಸಿ ಅದರ ಘನತೆ ಗೌರವನ್ನು ಕಾಪಾಡಿಕೊಂಡು ಇಲ್ಲಿಯವರೆಗೆ ಬಂದಿದೆ. ಈ ರಾಜ್ಯದ ಆಡಳಿತವನ್ನು ಪ್ರತಿಬಿಂಬಿಸತಕ್ಕಂಥಾದ್ದು ವಿಧಾನಸಭೆ ಮತ್ತು ವಿಧಾನಪರಿಷತ್ತು. ಅಂತಹ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ನಡೆಯತಕ್ಕಂಥ ಕಾರ್ಯಕ್ರಮಗಳ ಬಗ್ಗೆ, ಚರ್ಚೆಗಳ ಬಗ್ಗೆ, ಯಾರು ಆ ಚರ್ಚೆ ಸದುಪಯೋಗವಾಗುತ್ತಿದೆ ಎಂದು ಹೇಳತಕ್ಕಂಥ ವ್ಯಕ್ತಿ. ಇದು ನಿಷ್ಪ್ರಯೋಜಕವಾಗಿರತಕ್ಕಂಥ ಚರ್ಚೆ, ಸದನದಲ್ಲಿ ಸರಿಯಾಗಿ ಚರ್ಚೆ ಮಾಡುತ್ತಿಲ್ಲ, ಈ ಸದನದಲ್ಲಿ ನಡೆಯತಕ್ಕಂಥದ್ದು ತೌಡು ಕುಟ್ಟುವ ಕೆಲಸ ಎಂದು ಹೇಳುವಂತಹ ಮಾತು, ಇದು ಬೇಲಿ ಎದ್ದು ಹೊಲ ಮೇಯ್ದ ಹಾಗೆ ಆಗುತ್ತಿದೆ. ಇದು ಸದನಕ್ಕೆ, ತಮಗೆ ಮತ್ತು ಎಲ್ಲಾ ಸದಸ್ಯರಿಗೆ ಆ ಗೌರವ ತರತಕ್ಕಂಥ ವಿಷಯ. ಇದರಲ್ಲಿ ನಾವು ಹೇಳತಕ್ಕಂಥಾದ್ದು ಏನೆಂದರೆ ಯಾರು ಸದನದ ಗೌರವವನ್ನು ಕಾಪಾಡಬೇಕಾಗಿತ್ತು. ಅವರೇ ಈ ಸದನದ ಮರ್ಯಾದೆಯನ್ನು ಕಳೆಯತಕ್ಕಂಥ ವಿಚಾರಕ್ಕೆ ಪೂರಕವಾಗಿ ಅವರು ಹೇಳಿರತಕ್ಕಂಥ ವಿಷಯವನ್ನು ಹೇಳುತ್ತೇನೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಡಿ.ಬಿ. ಚಂದ್ರೇಗೌಡರು ಒಂದು ಪತ್ರಿಕೆಯಲ್ಲಿ ಮತ್ತು ಒಂದು ಸಭೆಯಲ್ಲಿ ಹೇಳಿರತಕ್ಕಂಥ ವಿಷಯ. ಅದೇನೆಂದರೆ ವಿಧಾನಮಂಡಲದ ಎರಡೂ ಸದನಗಳನ್ನುದ್ದೇಶಿಸಿ ಹೇಳಿದ್ದಾರೆ. ಆದರೆ ಆ ಸದನದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನನಗೆ ಅನುಮತಿ ಇಲ್ಲ. ತೌಡು ಕುಟ್ಟಿದರೆ ಭತ್ತವೂ ಇಲ್ಲ, ಅಕ್ಕಿಯೂ ಇಲ್ಲ, ವಿಧಾನಮಂಡಲದ ಉಭಯ ಸದನಗಳಲ್ಲಿ ನಡೆಯುವುದು ತೌಡು ಕುಟ್ಟುವ ಕೆಲಸವೇ ಹೊರತು ಬೇರೆನೂ ಇಲ್ಲ ಎಂದು ನಮ್ಮೆಲ್ಲರ ಬಗ್ಗೆ ಹೇಳಿ ಅದರ ಜೊತೆಗೆ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಶಾಸನ ಸಭೆಗಳ ಮೇಲೆ ಇಂದು ಅಧಿಕಾರ ವ್ಯಾಮೋಹ ಹಾಗೂ ಸ್ವಾರ್ಥ ಲಾಲಸೆಗಳು ಧಾಳಿ ಮಾಡುತ್ತಿವೆ. ಅದನ್ನು ತಡೆಗಟ್ಟಲು ನಿಸ್ವಾರ್ಥ ಮತ್ತು ಪ್ರಾಮಾಣಿಕ ಮತ್ತು ವಿದ್ಯಾವಂತ ವ್ಯಕ್ತಿಗಳು ವಿಧಾನಸಭಎ ಮತ್ತು ಪಾರ್ಲಿಮೆಂಟ್‌ಗೆ ಪ್ರವೇಶ ಮಾಡಬೇಕು ಎಂದು ಹೇಳಿದ್ದಾರೆ ಹಾಗಾಗದರೆ ನಾವೆಲ್ಲಾ ಯಾರು? ನಮ್ಮ ಮರ್ಯಾದೆ ಏನಾಗುತ್ತದೆ?